ಅಧ್ಯಕ್ಷರು : ಬಗೆಹರಿಸೋಣ. ನಾನು ತಮ್ಮ ಜೊತೆಗೆ ಇರುತ್ತೇನೆ. ವಾಟಾಳ್ ನಾಗರಾಜ್‌ರವರೇ ಮಾತನಾಡಿ. ನೀವು ನಿಧಾನ ಮಾಡಿದರೆ ಈ ರೀತಿ ಎದ್ದು ನಿಂತುಕೊಂಡು ಬಿಡುತ್ತಾರೆ.

ಶ್ರೀ ಎಸ್.ಆರ್. ಗುತ್ತೇದಾರ್ : ಮಾನ್ಯ ಅಧ್ಯಕ್ಷರೇ, ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು : ಒಂದು ನಿಮಿಷ. ಎಷ್ಟು ಸಮಯ ನಮಗೆ ಇರುತ್ತದೆ ಯಾವ ಯಾವ ಕಾರ್ಯಕ್ರಮಕ್ಕೆ ಎಷ್ಟು ಸಮಯ ನಿಗಧಿ ಮಾಡಬೇಕು ಎಂದು ನಿಮ್ಮ ನಾಯಕರುಗಳು ಆದಿಯಾಗಿ ಸದನದ ಕಾರ್ಯಕಲಾಪಗಳ ಸಮಿತಿಯಲ್ಲಿ ನಾವು ಇತ್ಯರ್ಥ ಮಾಡಿರುತ್ತೇವೆ. ಎಲ್ಲಾ ಸದಸ್ಯರು ಕೂಡ ತಮ್ಮ ಬಯಕೆಯನ್ನು ವ್ಯಕ್ತ ಮಾಡಿರುತ್ತಾರೆ. ಸದನದ ಸಮಯ ಎಷ್ಟು ನಮಗೆ ಲಭ್ಯವಾಗಿರುತ್ತದೆ ಅದನ್ನು ನೋಡಿಕೊಂಡು ನಾವು ಕಾರ್ಯಕ್ರಮದ ಪಟ್ಟಿಯನ್ನು ಮಾಡಿರುತ್ತದೆ. ಈ ದಿವಸ ಕಡೆಯ ದಿವಸ. ಅದಕ್ಕೆ ಎಷ್ಟು ಸಾಧ್ಯವೋ ಅಷ್ಟು ತಂದಿದ್ದೇವೆ. ಬಹಳ ಜರೂರಾಗಿದ್ದರೆ ಆಮೇಲೆ ನನ್ನ ಕೊಠಡಿಯಲ್ಲಿ ತಾವು ಬಂದು ಭೇಟಿ ಆಗಿ, ಸಚಿವರ ಜೊತೆಯಲ್ಲಿ ಮಾತನಾಡಿ ತಮಗೆ ಏನು ಸೌಕರ್ಯಬೇಕೋ ಅದನ್ನು ಮಾಡಿಸಿಕೊಡುತ್ತೇನೆ.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದುವರೆದಿದ್ದು)

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಹೊಸ ಸರ್ಕಾರ ಬಂದಮೇಲೆ ರಾಜ್ಯಪಾಲರ ಈ ಒಂದು ಭಾಷಣ ಮಾಡಿದ್ದಾರೆ. ಮೊದಲನೆಯದಾಗಿ ನಾನು ರಾಜ್ಯಪಾಲರ ಭಾಷಣದ ವ್ಯವಸ್ಥೆಯನ್ನೇ ಮೊದಲಿನಿಂದಲೂ ವಿರೋಧ ಮಾಡುತ್ತಿದ್ದೇನೆ. ಈ ವ್ಯವಸ್ಥೆ ಒಂದು ನಾಟಕೀಯವಾಗಿದೆ. ಇದು ಸಂವಿಧಾನ ಬದ್ಧವಾಗಿ ಇರತಕ್ಕಂಥ ವ್ಯವಸ್ಥೆ ಇದ್ದರೂ ದೇಶದ ಚಿಂತಕರೆಲ್ಲರೂ ಇದರ ಬಗ್ಗೆ ಚಿಂತನೆಯನ್ನು ಮಾಡಬೇಕಾದುದು ಅತಿ ಮುಖ್ಯವಾದಂತಹ ಕರ್ತವ್ಯ. ರಾಜ್ಯಪಾಲರು ಭಾಷಣ ಏನಿದೆ ಇದು ರಾಜ್ಯಪಾಲರೇ ತಯಾರು ಮಾಡಿ ಓದಿದಂತಹ ಭಾಷಣ ಅಲ್ಲ, ಇದು ರಾಜ್ಯ ಸರ್ಕಾರ ಸಚಿವ ಸಂಪುಟ ತಯಾರಿಸಿದಂತಹ ಭಾಷಣವನ್ನು ರಾಜ್ಯಪಾಲರ ಬಾಯಿಯಲ್ಲಿ ಹೇಳಿಸುವ ವಿಧಾನ, ಇದು ಒಂದು ರೀತಿ ಪರಕಾಯ ಪ್ರದೇಶ. ರಾಜ್ಯಪಾಲರು ಹೆಸರಿಗೆ ಅವರ ಬಾಯಲ್ಲಿ ಬರುವ ಪದಗಳೆಲ್ಲವೂ ಸರ್ಕಾರ ತಯಾರು ಮಾಡಿದಂತಹ ಪದಗಳು. ಅವರು ಈ ಸದನದಲ್ಲಿ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡುವಾಗ ರಾಜ್ಯ ಸರ್ಕಾರ ತಯಾರು ಮಾಡಿದ ಒಂದು ಪದವನ್ನು ಸಹ ಬದಲಾವಣೆ ಮಾಡತಕ್ಕಂಥ ವ್ಯವಸ್ಥೆ ಇಲ್ಲ, ಯಾವುದೇ ಸರ್ಕಾರ ಬಂದರೂ ನನ್ನ ಸರ್ಕಾರ ನನ್ನ ಸರ್ಕಾರ ಎಂದು ಅವರು ತಮ್ಮ ಭಾಷಣದಲ್ಲಿ ಹೇಳಲೇಬೇಕು. ಒಂದು ರೀತಿ ರಾಜ್ಯಪಾಲರನ್ನು ಸರ್ಕಾರ ಬದಲಾವಣೆ ಆದಾಗಲೆಲ್ಲಾ ಪಕ್ಷಾಂತರವನ್ನು ನಾವು ಮಾಡಿಸುತ್ತಿದ್ದೇವೆ. ಕಾಂಗ್ರೆಸ್ ಸರ್ಕಾರ ಬಂತು ನನ್ನ ಸರ್ಕಾರ ಎಂದು ಹೇಳಿದರು. ಈಗ ಜನತಾದಳ ಸರ್ಕಾರ ಬಂತು ನನ್ನ ಸರ್ಕಾರ ಎಂದು ಹೇಳುತ್ತಾರೆ. ನಾಳೆ ಇನ್ನೊಂದು ಸರ್ಕಾರ ಬಂದರೆ ನನ್ನ ಸರ್ಕಾರ ನನ್ನ ಸರ್ಕಾರ ಎಂದು ಹೇಳುತ್ತಾರೆ. ನನ್ನದು ಬಂದರೂ ಅಷ್ಟೇ, ನಿಮ್ಮದು ಬಂದರೂ ಅಷ್ಟೇ, ಯಾವುದೇ ಸರ್ಕಾರ ಬರಲಿ ಇದನ್ನು ಹೇಳುತ್ತಾರೆ. ನನಗೆ ರಾಜ್ಯಪಾಲರ ಬಗ್ಗೆ ವ್ಯಕ್ತಿಗತವಾಗಿ ಅಪಾರವಾದ ಗೌರವ ಇದೆ. ನಾನು ಯಾವುದೇ ಸಂದರ್ಭದಲ್ಲೂ ಎಷ್ಟು ಪ್ರಾಮಾಣಿಕವಾದ ಗೌರವ ಕೊಡಬೇಕೋ ಅದನ್ನು ಕೊಟ್ಟಿದ್ದೇನೆ. ಈ ವ್ಯವಸ್ಥೆ ಸರಿ ಇಲ್ಲ ಎನ್ನತಕ್ಕಂಥಾದ್ದು ನನ್ನ ಭಾವನೆ.

ಸಮಾಜವಾದಿ ಸಿದ್ಧಾಂತವನ್ನು ರೂಢಿಸಿಕೊಂಡಿರತಕ್ಕಂಥವರು ಈ ಸದನಕ್ಕೆ ಬಂದಿದ್ದಾರೆ. ಈ ಒಂದು ಸಮಾಜವಾದಿ ಸಿದ್ಧಾಂತದ ಬಗ್ಗೆ ಅಪಾರವಾದಂಥ ಅನುಭವವುಳ್ಳಂಥವರು, ಒಂದು ಕಾಲದಲ್ಲಿ ಸಮಾಜವಾದಿ ಚಳುವಳಿಯ ದೊಡ್ಡ ಹಿರಿಯ ಮುಖಂಡರಾಗಿದ್ದಂಥ ಶಾಂತವೇರಿ ಗೋಪಾಲಗೌಡರವರು ಮೈಸೂರಿನ ರಾಜರ ವಿರುದ್ಧ, ಅರಮನೆಯ ಅರಸೊತ್ತಿಗೆಯ ವಿರುದ್ಧ ಜಂಬೂಸವಾರಿಯ ವಿರುದ್ಧ ರಾಜಮನೆತನದ ವಿರುದ್ಧ ಕಪ್ಪುಬಾವುಟವನ್ನು ಪ್ರದರ್ಶನ ಮಾಡಿ ಮೈಸೂರಿನಲ್ಲಿ ಬಂಧನವಾಗಿರತಕ್ಕಂಥಾದ್ದು ಎಷ್ಟೋ ಭಾರಿ.....

ಅಧ್ಯಕ್ಷರು : ಸನ್ಮಾನ್ಯ ಮುಖ್ಯಮಂತ್ರಿಯವರು ಸಭೆಯಲ್ಲಿ ಉಪಸ್ಥಿತರಿದ್ದಾರೆ. ರೈಲ್ವೆ ಅಪಘಾತದ ವಿವರಗಳೆಲ್ಲಾ ಅವರ ಕಡೆಯಲ್ಲಿ ಇದ್ದಾವೆ. ಅವರು ಸದನಕ್ಕೆ ತಿಳಿಸಿದ ನಂತರ ತಾವುಗಳು ಭಾಷಣವನ್ನು ಮುಂದುವರಿಸಬಹುದು.

ಮಂತ್ರಿಗಳ ಹೇಳಿಕೆ

1. ಉದ್ಯಾನ ಎಕಸ್ಪ್ರೆಸ್ ರೈಲು ಅಪಘಾತವಾಗಿರುವ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಬೆಳಿಗ್ಗೆ 7-10 ಗಂಟೆಯ ನಂತರ, 7-15ರ ಒಳಗಡೆ ಬೊಂಬಾಯಿ ಮತ್ತು ಬೆಂಗಳೂರಿನ ಮಧ್ಯೆ ಓಡಾಡತಕ್ಕಂಥ ಉದ್ಯಾನ್ ಎಕಸ್ಪ್ರೆಸ್ ರೈಲಿಗೆ ಅಪಘಾತವಾಗಿ ಬೆಂಗಳೂರಿನ ಯಲಹಂಕದ ಸಮೀಪದಲ್ಲಿ ಈಗಾಲೇ ಏಳು ಜನರು ಸಾವನ್ನಪ್ಪಿರತಕ್ಕಂಥ ವಿಷಾದದ ಸಂಗತಿಯನ್ನು ಈ ಸದನಕ್ಕೆ ತಿಳಿಸಲು ದುಃಖಪಡುತ್ತೇನೆ. ಈ ಆಕಸ್ಮಿಕ ಅಪಘಾತದಲ್ಲಿ ಸುಮಾರು 65 ಜನರಿಗೆ ತೀವ್ರತರವಾದ ಗಾಯಗಳು ಆಗಿದ್ದು ಅವರಲ್ಲಿ 17 ಜನರ ಸ್ಥಿತಿಯು ತುಂಬಾ ಚಿಂತಾಜನಕವಾಗಿದೆ. ಈ ಸುದ್ದಿ ತಿಳಿದ ತತ್‌ಕ್ಷಣ ನಮ್ಮ ಮಾನ್ಯ ಮುಖ್ಯಮಂತ್ರಿಯವರಾದ ದೇವೇಗೌಡರು ಸ್ಥಳಕ್ಕೆ ಭೇಟಿಕೊಟ್ಟು ಬಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರ ಜೊತೆಗೆ ನಾನು ಗೃಹಸಚಿವನಾಗಿ ಮತ್ತು ಸಹಕಾರ ಮಂತ್ರಿಗಳಾದ ಎಸ್.ಎಸ್. ಪಾಟೀಲ್‌ರವರು ಮತ್ತು ಆರೋಗ್ಯ ಸಚಿವರಾದ ಡಾ ಮಹದೇವಪ್ಪರವರು ಕೂಡ ಭೇಟಿಯನ್ನು ಕೊಟ್ಟಿದ್ದಾರೆ. ಸದರನ್ ರೈಲ್ವೆಯ ಜನರಲ್ ಮ್ಯಾನೇಜರ್‌ರವರಾದ ಮಾನ್ಯ ಅಗ್ನಿಹೋತ್ರಿಯವರು, ಪೋಲೀಸ್ ಇಲಾಖಾ ಮುಖ್ಯಸ್ಥರಾದ ರಾಮಲಿಂಗಂರವರು, ಬೆಂಗಳೂರು ನಗರದ ಪೋಲೀಸ್ ಕಮಿಶನರ್ ಮಾನ್ಯ ಶ್ರೀನಿವಾಸಲುರವರು, ಮತ್ತಿತರ ಅಧಿಕಾರಿಗಳು ರೆಸ್ಕ್ಯೂ ಅಪರೇಷನ್ನು ಸೂಪರ್ವೈಸ್ ಮಾಡುತ್ತಾ ಇದ್ದಾರೆ. ಈಗಾಗಲೇ 65 ಜನರನ್ನು ನಗರದ ವಿವಿಧ ಆಸ್ಪತ್ರೆಗಳಿಗೆ ಸೇರಿಸಿ ಅವರಿಗೆ ಬೇಕಾಗಿರತಕ್ಕಂಥ ಚಿಕಿತ್ಸೆಯನ್ನು ಕೊಡಲಿಕ್ಕೆ ಸೂಕ್ತವಾದ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಹಾಗೆಯೇ ಈ ಅಪಘಾತ ಹೇಗೆ ಆಯಿತು ಎಂದು ತಿಳಿದುಕೊಳ್ಳುವ ದೃಷ್ಟಿಯಿಂದಾಗಿ ರೈಲ್ವೆ ಸೇಫ್ಟಿಕಮಿಷನ್‌ನ ಕಮಿಷನ್ರವರಾದ ಶ್ರೀ ರಾಮಮೋಹನ್ರವರು ಸ್ಥಳಕ್ಕೆ ಭೇಟಿ ಕೊಟ್ಟು ಏಕೆ ಈ ಅಪಘಾತವಾಯಿತು ಎಂಬ ಬಗ್ಗೆ ವಿಚಾರಣೆಯನ್ನು ಪ್ರಾರಂಭ ಮಾಡಿದ್ದಾರೆ. ನಮ್ಮ ಪೋಲೀಸ್ ಇಲಾಖೆಯವರು, ಆರೋಗ್ಯ ಇಲಾಖೆಯವರು, ಮತ್ತು ಇತರ ನಮ್ಮ ಸಂಬಂಧಪಟ್ಟ ವಿವಿಧ ಇಲಾಖಾ ಅಧಿಕಾರಿಗಳು ಸಂಪೂರ್ಣವಾಗಿ ಮಾನ್ಯ ಮುಖ್ಯಮಂತ್ರಿಯವರ ಸೂಚನೆಯಂತೆ ರೆಸ್ಕ್ಯೂ ಅಪರೇಷನ್ಗೆ ಎಲ್ಲರೂ ಅಲ್ಲಿದ್ದಾರೆ. ನಮ್ಮ ಸರಕಾರದ ನಿಯೋಜಿತ ಮುಖ್ಯ ಕಾರ್ಯದರ್ಶಿಗಳು ಕೂಡ ಅಲ್ಲಿಯೇ ಇದ್ದು, ಅಲ್ಲಿನ ಪರಿಸ್ಥಿತಿಯನ್ನು ನಿಭಾಯಿಸಲು ತಮ್ಮ ಎಲ್ಲಾ ಪ್ರಯತ್ನಗಳನ್ನು ಸಹಿತ ಮಾಡುತ್ತಾ ಇದ್ದಾರೆ.

ಬಿಎಸ್ಎಫ್, ಸಿಆರ್ಪಿಎಫ್ ಮತ್ತು ಇತರ ಕೇಂದ್ರ ಸರಕಾರದ ಸಿಬ್ಬಂದಿ ವರ್ಗದವರೂ ಕೂಡ ಸಹಕಾರವನ್ನು ಕೊಟ್ಟಿದ್ದಾರೆ. ಯಲಹಂಕ ಮತ್ತು ಸುತ್ತುಮುತ್ತಲಿನ